

ಹಾವು, ಅಪ್ಪ ಬಲವಾಗಿ ಬಾಗಿಲು ಹಾಕಿದ್ದರಿಂದ ನಮ್ಮ ಮನೆಯ ಒಳಕ್ಕೆ ಬರದೇ ಅಲ್ಲೇ ಸಾವನ್ನಪ್ಪಿತ್ತು.

ನಮ್ಮಜ್ಜನ ಮನೆ, ಶೃಂಗೇರಿ ಸಮೀಪದ ಹಸಿರಿನ ಮಡಿಲು ತೋರಣಗದ್ದೆಗೆ ಹೋದಾಗ, ಅಲ್ಲಿನ ಕೆರೆಯಲ್ಲಿ ನೀರು ಹಾವುಗಳು ದರ್ಶನ ಕೊಡುತ್ತಿದ್ದವು. ಇವು ಸಹ ವಿಷರಹಿತ ಹಾವುಗಳು. ತೋರಣಗದ್ದೆಯಲ್ಲಿ ಮರಗಳ ಮೇಲಿರುತ್ತಿದ್ದ ನಿರುಪದ್ರವಿ, ವಿಷವಿಲ್ಲದ ಹಸಿರು ಹಾವುಗಳನ್ನು ನಮ್ಮ ಸೋದರ ಮಾವಂದಿರು ಕೈಯಲ್ಲಿ ಹಿಡಿದು ಎಳೆಯುತ್ತಿದ್ದರು. ನಮಗೆ ಅವರ ಈ ಸಾಹಸ ವಿಶೇಷವಾಗಿ ಕಾಣುತ್ತಿತ್ತು. ಸುತ್ತಲೂ ಕಾಡು–ತೋಟಗಳು ಆವರಿಸಿದ್ದ ಆ ಮನೆಯ ಹತ್ತಿರವೇ ಅಶ್ವತ್ಥಮರ, ನಾಗರಕಟ್ಟೆ ಇತ್ತು. ದಿನವೂ ಅಲ್ಲಿ ಪೂಜೆ ನಡೆಯುತ್ತಿತ್ತು. ಹೀಗಾಗಿ ನಮ್ಮ ಮನೆಯ ಒಳಗೆ ಯಾವುದೇ ಹಾವು ಬರುವುದಿಲ್ಲ ಎಂದು ಅಜ್ಜಿ ಹೇಳುತ್ತಿದ್ದರು. ನಾವು ಧೈರ್ಯವಾಗಿ ಹೊರಗಡೆ ಜಗಲಿಯಲ್ಲಿ, ಅಜ್ಜನ ಜೊತೆ ಯಾವುದೇ ಬಾಗಿಲು ಹಾಕಿಕೊಳ್ಳದೆ ಮಲಗುತ್ತಿದ್ದೆವು. ತೋರಣಗದ್ದೆಯಲ್ಲಿ ಯಾರು ಸಹ ಅಪ್ಪಿತಪ್ಪಿ ಕೂಡ ಕಾಳಿಂಗ ಸರ್ಪದ ಹೆಸರು ಹೇಳುತ್ತಿರಲಿಲ್ಲ. ಹೆಸರು ಹಿಡಿದು ಕೂಗಿದರೆ ಅದನ್ನು ಮನೆಗೆ ಕರೆದಂತೆ ಎಂಬುದು ಆ ಭಾಗದ ಜನರ ನಂಬಿಕೆಯಾಗಿತ್ತು.

ಮನೆಯೊಳಗೆ ಬರುತ್ತಿದ್ದ ಕಪ್ಪೆಗಳನ್ನು ಹಿಂಬಾಲಿಸಿ ಹಾವು ಬಂದು ಆತಂಕ ಸೃಷ್ಟಿಸಿದ ಒಂದು ನಿದರ್ಶನ, ನನ್ನ ನೆನಪಿನ ಕೋಶದಲ್ಲಿ ಅಚ್ಚಳಿಯದೆ ನಿಂತಿದೆ.

ನನ್ನ ತಮ್ಮ ಚಿಕ್ಕವನಿದ್ದಾಗ ಒಮ್ಮೆ ಆಟ ಆಡುತ್ತಿದ್ದವನು ಬಾಲ್ ಹುಡುಕುತ್ತಾ, ಅಪ್ಪನ ಆಫೀಸ್ ರೂಮಿನ ಪುಸ್ತಕದ ಕಪಾಟಿನ ಕೆಳಗೆ ಕೈಹಾಕಿದ್ದಾನೆ. ಆಗ ಅವನು ಅಲ್ಲೇನೋ ಇರುವುದನ್ನು ನೋಡಿ, ಅಮ್ಮನ ಬಳಿ ಬಂದು ಹೇಳಿದ್ದಾನೆ. ಅಮ್ಮ ಹೋಗಿ ಅಲ್ಲಿ ನೋಡಿದರೆ, ದೊಡ್ಡ ಹಾವು ಸುರುಳಿ ಸುತ್ತಿಕೊಂಡು ಮಲಗಿದೆ! ಅದೃಷ್ಟವಶಾತ್ ಅಲ್ಲಿ ಕೈಹಾಕಿದ ತಮ್ಮನನ್ನು ಅದು ಕಚ್ಚಿಲ್ಲ. ನಮ್ಮ ಮನೆಯ ಆಫೀಸ್ ರೂಂ ಹಲವಾರು ವಸ್ತುಗಳಿಂದ ತುಂಬಿದ್ದ ಜಾಗ. ಪುಸ್ತಕದ ಕಪಾಟು, ಅಪ್ಪನ ಟೇಬಲ್, ಚೇರ್, ಎರಡೆರಡು ಮಂಚಗಳು ಹೀಗೆ ಅಡಗಿಕೊಳ್ಳಲು ಸಾಕಷ್ಟು ತಾಣಗಳಿದ್ದ ಕಡೆ ಈ ಹಾವು ಬಂದು ಸೇರಿಕೊಂಡಿದೆ! ಆಗ ಶೃಂಗೇರಿಯಲ್ಲಿ ಹಾವನ್ನು ಹಿಡಿದು ಸುರಕ್ಷಿತ ತಾಣಕ್ಕೆ ಬಿಡಬಲ್ಲ ಉರಗ ತಜ್ಞರು ಇರಲಿಲ್ಲ. ಆಗಾಗ ಹಾವಾಡಿಗರು ಬಂದು ಪುಂಗಿ ಊದಿ ಬುಟ್ಟಿಯಲ್ಲಿ ತಾವು ಹಿಡಿದು ತಂದ ಹಾವುಗಳ ಹೆಡೆ ಬಿಚ್ಚಿಸಿ ನಮ್ಮೆದುರು ಪ್ರದರ್ಶಿಸಿ ಭಯ ಮೂಡಿಸುತ್ತಿದ್ದರು. ಅವರನ್ನು ಕರೆಸಿ ಹಾವನ್ನು ಹಿಡಿಸೋಣವೆಂದರೆ ಅಲೆಮಾರಿಗಳಾದ ಅವರಿರುವ ತಾಣವನ್ನು ಬಲ್ಲವರಾರು? ಜೊತೆಗೆ ನಮ್ಮ ಮನೆಯಲ್ಲಿ ಹಾವನ್ನು ಹಿಂಸಿಸುವುದು ಯಾರಿಗೂ ಇಷ್ಟವಿರಲಿಲ್ಲ.

ಇಂದಿನ ದಿನಗಳಲ್ಲಿ 'ಸ್ನೇಕ್ ಮ್ಯಾನ್'ಗಳ ಹಲವಾರು ವಿಡಿಯೊಗಳನ್ನು ನೋಡುತ್ತೇವೆ. ಭಯಾನಕ ಘಟಸರ್ಪಗಳು ಎಲ್ಲೇ ಇದ್ದರೂ ಹಿಡಿದು ಚೀಲದೊಳಗೆ ತುಂಬಿಕೊಂಡು ಹೋಗುವ,